# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **347** |
| ಸದಸ್ಯರ ಹೆಸರು | : | ಡಾ:ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 07-07-2023 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಫುಡ್ ಕರ್ನಾಟಕ ಲಿಮಿಟೆಡ್ ಎಂಬ ಸಂಸ್ಥೆಯು ಕೃಷಿ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಇದನ್ನು ಸ್ಥಾಪನೆ ಮಾಡಿದ್ದು ಯಾವಾಗ; ಇದರ ಧ್ಯೇಯೋದ್ದೇಶಗಳೇನು; | ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನುದಾನವನ್ನು ಬಳಸಿಕೊಂಡು ರಾಜ್ಯದಲ್ಲಿ ಆಹಾರ ಪಾರ್ಕ್‌ಗಳನ್ನು ಸ್ಥಾಪಿಸುವ ಯೋಜನೆಯನ್ನು ಕಾರ್ಯಗತಗೊಳಿಸುವ ಮುಖ್ಯ ಧ್ಯೇಯೋದ್ದೇಶದೊಂದಿಗೆ, ವಿಶೇಷ ಉದ್ದೇಶದ ಸಂಸ್ಥೆಯಾದ (Special purpose vehicle) "ಆಹಾರ ಕರ್ನಾಟಕ ನಿಯಮಿತ" (Food Karnataka Limited) ವನ್ನು ದಿನಾಂಕ: 29.04.2003 ರಂದು ಕಂಪನಿಗಳ ಕಾಯ್ದೆ, 1956 ರ ಅಡಿಯಲ್ಲಿ ಸ್ಥಾಪಿಸಲಾಯಿತು.<br><br><u>ಸಂಸ್ಥೆಯ ಮುಖ್ಯ ಉದ್ದೇಶಗಳು</u><br><br>1. ಕರ್ನಾಟಕದಲ್ಲಿ ಕೃಷಿ/ಆಹಾರ ಸಂಸ್ಕರಣಾ ಉದ್ಯಮವನ್ನು ಉತ್ತೇಜಿಸುವುದು ಮತ್ತು ಆಹಾರ ಪಾರ್ಕ್‌ಗಳ ಸ್ಥಾಪನೆಯಲ್ಲಿ ಖಾಸಗಿ ವಲಯದ ಹೂಡಿಕೆಯನ್ನು ಪ್ರೋತ್ಸಾಹಿಸುವುದು.<br>2. ಕೃಷಿ ಮತ್ತು ಆಹಾರ ಕೈಗಾರಿಕೆಗಳನ್ನು ಸ್ಥಾಪಿಸಲು ಉದ್ದೇಶಿಸಿರುವ ಉದ್ಯಮಿಗಳಿಗಾಗಿ ವಸ್ತು ಪ್ರದರ್ಶನಗಳು, ವ್ಯಾಪಾರ ಮೇಳಗಳು, ವಿಚಾರ ಸಂಕಿರಣಗಳು, ಮಾರುಕಟ್ಟೆ ಸಂಶೋಧನೆ ಮುಂತಾದವುಗಳನ್ನು ಆಯೋಜಿಸಲು ಎಲ್ಲಾ ರೀತಿಯಲ್ಲಿ ಬೆಂಬಲ ನೀಡಿ ಪ್ರೋತ್ಸಾಹಿಸುವುದು.<br>3. ರಾಜ್ಯದಲ್ಲಿ ಆಹಾರ ಪಾರ್ಕ್‌ಗಳ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಉಸ್ತುವಾರಿ ಕೈಗೊಳ್ಳುವುದು.<br>4. ಕೊಯ್ಲಿನ ನಂತರದ ನಷ್ಟವನ್ನು ಕಡಿಮೆ ಮಾಡುವುದು, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಮತ್ತು ಸಂಸ್ಕರಣೆ ಹಾಗೂ ಮೌಲ್ಯವರ್ಧನೆಯ ಮಟ್ಟವನ್ನು ಹೆಚ್ಚಿಸುವುದು. |

| | | |
|---|---|---|
| ಇ) | ರಾಜ್ಯದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಆಹಾರ ಪಾರ್ಕ್ ಯಾವುವು; ಇವುಗಳನ್ನು ಸ್ಥಾಪನೆ ಮಾಡಿರುವ ಉದ್ದೇಶವೇನು; | ಅ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಿರುವ ಆಹಾರ ಪಾರ್ಕ್‌ಗಳು.<br>1. ಇನ್ನೋವ ಅಗ್ರಿ ಬಯೋ ಪಾರ್ಕ್, ಮಾಲೂರು<br>2. ಗ್ರೀನ್ ಫುಡ್ ಪಾರ್ಕ್, ಬಾಗಲಕೋಟೆ<br>3. ಅಕ್ಷಯ ಫುಡ್ ಪಾರ್ಕ್, ಹಿರಿಯೂರು<br>4. ಜೇವರ್ಗಿ ಅಗ್ರೋ ಫುಡ್ ಪಾರ್ಕ್, ಜೇವರ್ಗಿ<br><br>ಆ. ಕೇಂದ್ರ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿರುವ ಆಹಾರ ಪಾರ್ಕ್‌ಗಳು (ಕೇಂದ್ರ ಸರ್ಕಾರದ ನೇರ ಉಸ್ತುವಾರಿ ಮತ್ತು ಸಹಾಯಧನ ಬಿಡುಗಡೆ)<br>1. ಮೆ.// ಇಂಡಿಯಾ ಮೆಗಾ ಫುಡ್ ಪಾರ್ಕ್, ತುಮಕೂರು<br>2. ಮೆ.// ಫೆವೋರಿಚ್ ಮೆಗಾ ಫುಡ್ ಪಾರ್ಕ್, ಕೆ.ಆರ್. ಪೇಟೆ ತಾಲ್ಲೂಕು, ಮಂಡ್ಯಜಿಲ್ಲೆ<br>ಆಹಾರ ಪಾರ್ಕುಗಳ ಸ್ಥಾಪನೆಯ ಉದ್ದೇಶವೆಂದರೆ, ರಾಜ್ಯದ ಗ್ರಾಮೀಣ ಭಾಗದಲ್ಲಿ ರೈತರ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಆಹಾರ ಸಂಸ್ಕರಣ ಉದ್ದಿಮೆಗಳ ಸ್ಥಾಪನೆಗೆ ಅವಶ್ಯಕವಿರುವ ಸಾಮೂದಾಯಿಕ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ (PPP Model) ಸ್ಥಾಪಿಸಿ, ಉದ್ಯೋಗ ಸೃಷ್ಟಿಸುವುದರ ಜೊತೆಗೆ ರೈತರ ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಕಟಾವು ನಂತರದ ನಷ್ಟವನ್ನು ತಗ್ಗಿಸಿ, ರೈತರ ಆದಾಯವನ್ನು ವೃದ್ಧಿಸುವುದು. |
| ಈ) | ಫುಡ್ ಕರ್ನಾಟಕ ಲಿಮಿಟೆಡ್‌ನಿಂದ ಫುಡ್ ಪಾರ್ಕ್‌ಗಳಿಗೆ ಯಾವುದೇ ರೀತಿಯ ಸಹಾಯ ಇಲ್ಲದೇ ವಿನಾಕಾರಣ ಫುಡ್ ಪಾರ್ಕ್‌ಗಳಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಉ) | ಫುಡ್ ಕರ್ನಾಟಕ ಲಿಮಿಟೆಡ್ ಉದ್ದೇಶಗಳು ಇದುವರೆವಿಗೂ ಈಡೇರದೇ ಇರುವುದಕ್ಕೆ ಕಾರಣರಾಗಿರುವ ಅಧಿಕಾರಿಗಳು ಯಾರು, ಅಂತಹವರ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? | ಫುಡ್ ಪಾರ್ಕ್‌ಗಳ ಸ್ಥಾಪನೆಯ ಉದ್ದೇಶಗಳಿಗೆ ಅನುಗುಣವಾಗಿ, ಮಾರ್ಗಸೂಚಿಗಳು ಹಾಗೂ ಸರ್ಕಾರದ ನಿಯಮಗಳು/ಆದೇಶಗಳ ಅನುಸಾರ ಫುಡ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. |

*ಕೃ ಇ 49 ಎಎಂಎಸ್ 2023*

(ಎನ್.ಚೆಲುವರಾಯಸ್ವಾಮಿ)

ಕೃಷಿ ಸಚಿವರು